ಮರೆಮಾಚಿ ರಾರಾಜಿಸುತ್ತಿದ್ದವು. ನೀರಿಗೆ ಬೆರೆಸಿದ ಬ್ರಾಂದಿಯಂತಿದ್ದ ಮಂದ ಹಳದೀ ಬಣ್ಣದ ಲೈಟ್‌ಗಳು. ಅಲ್ಲೆಲ್ಲೋ ದೂರದಲ್ಲಿ ಕೇಳಿಬರುತ್ತಿದ್ದ ಮೆಲುಸಂಗೀತ, ಅವರನ್ನು ಉಲ್ಲಾಸಗೊಳಿಸಿದ್ದರೂ, ಮುಂದೇನು ಮಾಡುವುದು ಎಂಬ ಪ್ರಶ್ನೆಯಷ್ಟೆ ನನ್ನನಾವರಿಸಿತ್ತು. ಫಿಂಗರ್ ಚಿಪ್ಸ್ ತಣ್ಣಗಾಗುತ್ತಾ ಬಂದಿದ್ದರೂ ಇಬ್ಬರೂ ಕೈಮುಂದು ಮಾಡಿರಲಿಲ್ಲ. ಅಲ್ಲೆಲ್ಲೋ ಇದ್ದ ಅವರ ದೃಷ್ಟಿ ಮಾತನಾರಂಭಿಸುತ್ತಾ ನನ್ನತ್ತ ಬಂದಿತು.

'ನಾನು ನಿಂಗೆ ತುಂಬಾ ಅನ್ಯಾಯ ಮಾಡಿದೀನಿ ಅನಿಸ್ತಿದೆ.'

'ಇದನ್ನ ತುಂಬಾ ಸರಿ ಹೇಳಿದ್ದೀರ, ಬೇರೇನಾದ್ರೂ ಇದ್ರೆ ಹೇಳಿ.'

'ನನ್ ಜೊತೆ ಇದ್ಬಿಡು, ನನ್ನ ಹೆಂಡತಿ ಜೊತೆ ನಾ ಇರೊಲ್ಲಾ.'

'ನಾನು ನಿಮ್ಮನ್ನೆಂದೂ ಪ್ರೀತಿಸಿಯೇ ಇಲ್ಲ, ನೀವಿಬ್ರೂ ಪ್ರೀತಿಸಿದವರು. ಹೆಚ್ಚು ಕಡಿಮೆ ಇದ್ದೇ ಇರುತ್ತೆ. ಎಲ್ಲಾ ಸರಿಹೋಗುತ್ತೆ ಬಿಡಿ. ನನ್ನ ಏಕಾಂಗಿತನಕ್ಕೆ ನಿಮ್ಮನುಕಂಪದ ಪ್ರೀತಿ ಬೇಡ. ಅರ್ಥಮಾಡ್ಕೊಂಡಿದ್ದಕ್ಕೆ ಥ್ಯಾಂಕ್ಸ್.'

ಉಕ್ಕಿ ಬಂದ ದುಃಖ ತಡೆಯಲಾರದೆ ಎದ್ದು ಹೊರಟೆ. ಮಗಳು ಗಂಡನ ಜೊತೆ ಚೆನ್ನಾಗಿಯೇ ಬಾಳುತ್ತಿದ್ದಾಳೆಂದು ಭಾವಿಸಿಯೇ ಕಣ್ಮುಚ್ಚಿದ್ದ ಅಮ್ಮನನ್ನು ನೆನೆದು ದುಃಖ ಉಮ್ಮಳಿಸಿತು. ನನಗೆ ಮಾಂಗಲ್ಯ ಕಟ್ಟಿ ನನ್ನ ಬಳಗಕ್ಕೀಗಲೂ ಗಂಡನೆನಿಸಿ, ನನಗೆ ಏನೂ ಆಗದೇ ಬರೀ ಬಾಸ್ ಆಗಿ ಉಳಿದ ಇವರ ಮೇಲೆ ನನಗ್ಯಾವ ಅಸಮಾಧಾನವಿಲ್ಲದ್ದಿದ್ದರೂ, ಕತ್ತಲ ಕೋಣೆಯಲಿ ಒಂಟಿತನವು ನನ್ನನಾವರಿಸಿ ಇರಿದಿರಿದು ಕೊಲ್ಲುವಾಗ, ಅಮ್ಮನ ಆತ್ಮವೂ ಜೊತೆಗೂಡಿ ಕಣ್ಣೀರಿಟ್ಟಂತೆ ನಾ ಭ್ರಮಿಸಿದಾಗ, ಇವರ ಮೇಲೆ ಕೆಟ್ಟ ಕೋಪ ಬರುತ್ತದೆ. ಅಷ್ಟು ಬಿಟ್ಟರೆ ಬೇರೇನೂ ಅನಿಸುತ್ತಿರಲಿಲ್ಲ, ನಮ್ಮ ಮದುವೆಯ ದಿನದಂತೆಯೇ.

ನನಗಿನ್ನೂ ನೆನಪಿದೆ. ಮಂಟಪಕ್ಕೆ ಹೋಗುವ ಮುನ್ನ ಮುರಾರಿ, ವಲ್ಲಭ್, ಮೋಹನ್ ಇನ್ನು ಯಾರ್‍ಯಾರೋ ನನ್ನನ್ನು ಪ್ರೀತಿಸುತ್ತೇನೆಂದು ಬೆನ್ನು ಬಿದ್ದಿದ್ದವರಲ್ಲಿ ಯಾರಾದರೂ ನನಗೆ ಮೆಸೇಜೋ, ಫೋನೋ ಮಾಡಿ 'ನಿನ್ನ ಬಿಟ್ಟು ನಾ ಬದುಕಲ್ಲ, ಪ್ಲೀಸ್ ಬೇರೆ ಯಾರನ್ನೊ ಮದ್ವೆ ಆಗಬೇಡ, ನನ್ನ ಸಾವಲ್ಲೂ ನಿನ್ನೇ ಪ್ರೀತಿಸ್ತೀನಿ...' ಇನ್ನೂ ಹೀಗೆ ಏನೇನೋ ಹೇಳಿ ಕಡೆಯ

